ಲಾಗಿದೆ. ಈ ವಿಚಾರ ಎಲ್ಲಿಗೆ ಮುಟ್ಟಿದೆ ? ಈ ಕುರಿತು ವಿವರವನ್ನು ತಿಳಿಯಲು ಗೃಹಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಹಾಗೂ ಕಾರ್ಮಿಕ ಸಚಿವರು).— ಮಾನ್ಯ ಅಧ್ಯಕ್ಷರೇ, ಇದು ವಿವಾದ ಇರತಕ್ಕಂಥಾದ್ದು ಮಿನಿಮಮ್ ವೇಜಸ್ ನೋಟಿಫಿಕೇಷನ್ ಮಾಡುವುದರ ಬಗ್ಗೆ. ಇವತ್ತು ನೋಟಿಫಿಕೇಷನ್ ಇಷ್ಯೂ ಮಾಡುತ್ತಿದ್ದೇವೆ. ಈ ವಿವಾದವನ್ನು ಇತ್ಯರ್ಥ ಮಾಡಲಿಕ್ಕೆ ಅಧಿಕಾರಿಗಳಿಗೆ ಹೇಳುತ್ತೇನೆ.

೫. ಹಿರಿಯೂರು ತಹಸೀಲ್ದಾರರ ಸಂಬಂಧಿಯೊಬ್ಬರು ಬೇರೆ ಹೆಸರಿನಲ್ಲಿ ರಾಷ್ಟ್ರೀಯ ಉಳಿತಾಯ ಏಜೆಂಟ್ ಆಗಿರುವ ಬಗ್ಗೆ.

ಶ್ರೀ ಆರ್. ರಾಮಯ್ಯ (ಹಿರಿಯೂರು).—ಮಾನ್ಯ ಅಧ್ಯಕ್ಷರೇ, ಹಿರಿಯೂರು ತಾಲ್ಲೂಕಿನ ತಹಸೀಲ್ದಾರ್ ನಾಗರಾಜ್‌ರ ಸಂಬಂಧಿ ಗೋಪಾಲ ಎಂಬುವವರು 'ಈಶ್ವರಪ್ಪ' ಎಂಬ ಹೆಸರಿನ ಮೇಲೆ ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟ್ ಏಜೆಂಟ್ ಆಗಿರುವುದಾಗಿ ತಿಳಿದು ಬಂದಿದೆ. ಗೋಪಾಲನೇ ಈಶ್ವರಪ್ಪ ಎಂಬುವ ಪ್ರಮಾಣ ಪತ್ರವನ್ನು ತಹಸೀಲ್ದಾರರು ದೃಢೀಕರಿಸಿ ಸಹಿ ಮಾಡಿದ್ದಾರೆ. ಸದರಿ ಗೋಪಾಲ ತಾನು ಈಶ್ವರಪ್ಪ ಹಿರಿಯೂರು ನಗರದ ಸಿದ್ದಲಿಂಗನಾಯ್ಕ ಸರ್ಕಲ್ ವಾಸಿ ಎಂಬ ವಿಳಾಸ ಕೊಟ್ಟಿರುತ್ತಾನೆ. ಆದರೆ ಹಿರಿಯೂರಿನಲ್ಲಿ ಸಿದ್ದಲಿಂಗನಾಯ್ಕ ಸರ್ಕಲ್ ಎಂಬುದೇ ಇಲ್ಲ. ಗೋಪಾಲನ ಭಾವಚಿತ್ರವನ್ನು ಈಶ್ವರಪ್ಪ ಎಂಬುದಾಗಿ ಪೋಟೊ ಸಹಿಯೊಂದಿಗೆ ಹಿರಿಯೂರಿನ ಹೆಡ್ ಪೋಸ್ಟ್ ಕಛೇರಿಯಲ್ಲಿ ನಮೂದಾಗಿರುವುದನ್ನು ಸಹ ನೋಡಬಹುದಾಗಿದೆ. ಮಾನ್ಯ ಮುಖ್ಯ ಮಂತ್ರಿಗಳನ್ನು ಎನ್.ಎಸ್.ಸಿ. ಸರ್ಟಿಫಿಕೇಟ್‌ಗಳಲ್ಲಿ ತುಲಾಭಾರ ಮಾಡುವ ಕಾರ್ಯಕ್ರಮದಲ್ಲಿ ಐದೂರು ಲಕ್ಷ ರೂಪಾಯಿ ಸರ್ಟಿಫಿಕೇಟ್‌ಗಳು ಈ ಪೋಟೊ ಏಜೆಂಟ್‌ನ ಮೂಲಕ ಆಗಿರುತ್ತದೆ. ಈ ವೇಸದ ಪ್ರಕರಣವನ್ನು ತನ್ನ ಸಂಬಂಧಿಗೆ ದುಡಿಮೆಯ ಮಾರ್ಗವಾಗಿ ಕಲ್ಪಿಸಿರುವ ತಹಸೀಲ್ದಾರರ ಮೇಲೆ ಅಪರಾಧ ಕಾಯ್ದೆ ಅನ್ವಯ ಕ್ರಮ ಜರುಗಿಸಲು ಕೋರುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ಕಾರ್ಮಿಕ ಮಂತ್ರಿಗಳು).— ಮಾನ್ಯ ಸದಸ್ಯರು ಗಂಭೀರವಾದ ವಿಚಾರಗಳನ್ನು ಹೇಳಿದ್ದಾರೆ. ಇದನ್ನು ಪರಿಶೀಲಿಸಿ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

೬. Mis management in A.P.S. College, N.R. Colony Bangalore.

SRI R. VENKATARAMAIAH.—Sir, the A.P.S. College in N.R. colony, Bangalore–19 is managed by the A.P.S. Educational Trust and the Government is paying cent–per–cent grants. The colleges have a strength of 4500 students. The Principal and the Secretary of the Trust are cousins. The former is the Principal of A.P.S. Commerce College now. The said Principal has promoted 9 students of I–P.U.C. who had failed during 1984–85 after collecting money from the students. On complaint to the Education Minister on 8–12–1985, an Enquiry was conducted by the P.U.E. Board on 7–1–1986. The Director, P.U.E. Board sent a letter to the Secretary of the Trust on 5–2–1986 to take action against the Principal.

The said Principal has also misappropriated huge funds collected to publish a Souvenir. He is harassing the staff by with holding salaries, increments, promotions, closing down some sections. The Management has not taken any action. The Government has not

followed up its order. Hence, I call the attention of the Hon. Minister for Education.

SRI G. BASAVANNAPPA.–Sir, I will bring this to the notice of the Hon. Minister for Education and request him to make a detailed statement.

೭. ಸೂರತ್ಕಲ್ ಸಮುದ್ರಕಿನಾರೆಯಿಂದ ಗುಡ್ಡೇಕೊಪ್ಪಳದವರೆಗಿನ ರಸ್ತೆಗೆ ಡಾಂಬರು ಹಾಕುವ ಬಗ್ಗೆ

ಶ್ರೀ ಎನ್. ಎಂ ಅಡ್ಯಂತಾಯ.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ಸೂರತ್ಕಲ್‌ದಿಂದ ಸಮುದ್ರಕಿನಾರೆಯ ಗುಡ್ಡೇಕೊಪ್ಪಳದವರೆಗಿನ ಸುಮಾರು ನಾಲ್ಕು ಕಿ.ಮೀ. ಉದ್ದದ ಗ್ರಾಮೀಣ ಸಂಪರ್ಕ ರಸ್ತೆಯು ಅತ್ಯಂತ ಶೋದಾರಸ್ಥಾದ ಸ್ಥಿತಿಯಲ್ಲಿದ್ದು ಅನೇಕ ವರ್ಷಗಳಿಂದ ರಿಪೇರಿ ಕಾದಿರುವುದು ಶೋಚನೀಯ. ಈ ಭಾಗದ ಸಾರ್ವಜನಿಕರು ಸಮಸ್ಯೆಯನ್ನು ಸರ್ಕಾರದ ಅಧಿಕಾರಿಗಳ ಗಮನಕ್ಕೆ ಅನೇಕ ಬಾರಿ ತಂದಾಗ್ಯೂ ಈ ಕುರಿತು ಯಾವ ಕ್ರಮಗಳನ್ನೂ ಇವರಿಗೆ ಕೈಗೊಂಡಿಲ್ಲ. ಸರ್ಕಾರವು ತಕ್ಷಣ ಈ ರಸ್ತೆಗೆ ಡಾಂಬರು ಹಾಕಿಸುವ ಮೂಲಕ ಸರ್ವಋತು ಸಂಚಾರ ಯೋಗ್ಯಗೊಳಿಸಬೇಕೆಂದು ನಾನು ಮಾನ್ಯ ಲೋಕೋಪಯೋಗಿ ಸಚಿವರನ್ನು ಆಗ್ರಹಿಸುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.–ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಸಚಿವರ ಗಮನಕ್ಕೆ ಈ ವಿಚಾರವನ್ನು ತಂದು ಅವರಿಂದ ಸೂಕ್ತ ಹೇಳಿಕೆಯನ್ನು ಕೊಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

೮. ಹರಪನಹಳ್ಳಿ ತಾಲ್ಲೂಕು ಬೇವಿನಹಳ್ಳಿ ಲಂಬಾಣಿ ತಾಂಡಕ್ಕೆ ಸರಿಯಾಗಿ ನೀರು ಸರಬರಾಜು ಮಾಡುವ ಬಗ್ಗೆ

ಶ್ರೀ ಬಿ. ಎಚ್. ಯಂಕಾನಾಯಕ್.—ಮಾನ್ಯ ಅಧ್ಯಕ್ಷರೇ, ಹರಪನಹಳ್ಳಿ ತಾಲ್ಲೂಕು ಬೇವಿನಹಳ್ಳಿ ತಾಂಡದ ಲಂಬಾಣಿ ಬಡಜನರು ಅವರ ತಾಂಡದ ನೀರು ಸರಬರಾಜಿನ ಬಗ್ಗೆ ಪಂಚಾಯತ್ ಮಂತ್ರಿಗಳಿಗೆ ಹಾಗೂ ಗ್ರಾಮೀಣಾಭಿವೃದ್ಧಿ ಮಂತ್ರಿಗಳಿಗೆ ಮನವಿಯನ್ನು ಸಲ್ಲಿಸಿ ನೀರು ಸರಿಯಾಗಿ ಸರಬರಾಜು ಆಗುತ್ತಿಲ್ಲವೆಂದೂ ನೀರಿನ ಪೈಪುಗಳನ್ನು ಆಳವಾಗಿ ಹುಗಿಯದೇ ಇರುವುದರಿಂದ ಪೈಪುಗಳು ಒಡೆಯುತ್ತಿದ್ದು ನೀರು ಸರಬರಾಜು ಆಗದೇ ತೊಂದರೆ ಪಡುತ್ತಿರುವುದಾಗಿ ತಿಳಿಸಿದ್ದಾರೆ. ಆದ್ದರಿಂದ ಸರಕಾರದವರು ಸಂಬಂಧಪಟ್ಟ ಅಧಿಕಾರಿಗಳಿಗೆ ಕೂಡಲೇ ಸೂಕ್ತ ಆದೇಶ ನೀಡಿ ಬೇವಿನಹಳ್ಳಿ ತಾಂಡದ ಜನರಿಗೆ ನೀರು ಸರಬರಾಜು ಸರಿಯಾಗಿ ಆಗುವಂತೆ ಕ್ರಮ ಕೈಕೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನು ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೋ ಆ ವಿಷಯವನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದು ಸೂಕ್ತ ಹೇಳಿಕೆಯನ್ನು ಕೊಡಿಸುತ್ತೇನೆ.

೯. ಬೆಂಗಳೂರು ನಾಗರೀಕರಿಗೆ ರೇಷನ್ನಿನ ಪದಾರ್ಥಗಳನ್ನು ಹೆಚ್ಚು ಮಾಡುವ ಬಗ್ಗೆ

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್. ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಾಗರೀಕರಿಗೆ ದೊರೆಯುತ್ತಿದ್ದ ರೇಷನ್ನಿನ ಆಹಾರ ಧಾನ್ಯ ವಿತರಣೆಯಲ್ಲಿ ಅಕ್ಕಿ ಮೊದಲಾದ ಆಹಾರ ಪದಾರ್ಥಗಳು ಕೊಡುತ್ತಿರುವುದು ಬಹಳಷ್ಟು ಕಡಿಮೆಯಾಗಿ ಜನರಿಗೆ ಬಹಳ ತೊಂದರೆಯಾಗಿದೆ ೧-೭-೧೯೮೬ರ ಸಮಯದಲ್ಲಿ ೧ ಯೂನಿಟ್‌ಗೆ ೨-೦ಕೆಜಿರಷ್ಟು ಕೊಡುತ್ತಿದ್ದ ಅಕ್ಕಿಯನ್ನು ಈ ತಿಂಗಳು ಅಂದರೆ ೧-೩-೧೯೮೭ರಿಂದ ಯೂನಿಟ್‌ಗೆ ೧-೭ಕೆಜಿಕ್ಕೆ ಇಳಿಸಿರುವುದು ಒಂದು ಕಾರ್ಡಿಗೆ ೪೦ ಕೆ.ಜಿ. ಇದ್ದುದ್ದನ್ನು ೨೫ ಕೆ ಜಿ. ಗೆ ಕಡಿತ ಮಾಡಲಾಗಿದೆ. ಹಾಗೆಯೇ ಕಾರ್ಡ್‌ದಾರರಿಗೆ ನೀಡಲಾಗುತ್ತಿದ್ದ ಪಾಮ್ ಆಯಿಲ್ ಸಲ್ಲಿಯೂ ಕಡಿತ ಮಾಡಲಾಗಿದೆ. ಕಟ್ಟುನಿಟ್ಟಿನ ಅವಶ್ಯಕತೆಯಾದ ಸೀಮೆ ಎಣ್ಣೆಗೂ ಕಡಿತ ಬಿದ್ದು